**ಪಾಠ-13** **ಜೂನ್ 18-24**

# ಐಗುಪ್ತ ದೇಶದಲ್ಲಿ ಇಸ್ರಾಯೇಲನು



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಅಧ್ಯಯನಕ್ಕಾಗಿ ಓದಿರಿ :** ಆದಿಕಾಂಡ 46; ರೋಮಾಪುರ 10:12,13; ಆದಿಕಾಂಡ 47,48; ಅಪೋಸ್ತಲರ ಕೃತ್ಯ 3:25,26; ಆದಿಕಾಂಡ 49; ಫಿಲಿಪ್ಪಿ 2:10; ಆದಿಕಾಂಡ 49:29-50:21.

**ಸ್ಮರಣವಾಕ್ಯ : "ಹಾಗಾಗಿ ಇಸ್ರಾಯೇಲ್ಯರು ಐಗುಪ್ತದೇಶದ ಗೋಷೆನ್ ಸೀಮೆಯಲ್ಲಿ ವಾಸಿಸಿದರು; ಮತ್ತು ಅವರು ಅಲ್ಲಿ ಆಸ್ತಿಯನ್ನು ಸಂಪಾದಿಸಿ ಬಹುಸಂತಾನವಾಗಿ ಬಹಳವಾಗಿ ಹೆಚ್ಚಿದರು"** (ಆದಿ 47:27).

ಯಾಕೋಬ ಮತ್ತು ಯೋಸೇಫರ ಜೀವಿತದ ಕೊನೆಯ ವರ್ಷಗಳನ್ನು ಒಟ್ಟಿಗೆ ಆದಿಕಾಂಡ ಪುಸ್ತಕವು ದಾಖಲಿಸಿದೆ. ಯಾಕೋಬನು (ಇಸ್ರಾಯೇಲ) ಕಾನಾನನ್ನು ಬಿಟ್ಟು (ಆದಿ 46) ಐಗುಪ್ತದಲ್ಲಿ ನೆಲೆಗೊಳ್ಳಲು ಹೋಗುವನು (ಆದಿ 47) ಮತ್ತು ಆತನು ಅಲ್ಲಿಯೇ ಸಾಯುವನು (ಆದಿ 49:29-50:21). ಇಂತಹ ಐಗುಪ್ತದೇಶದ ಸನ್ನಿವೇಶದಲ್ಲಿಯೂ ಸಹ ವಾಗ್ದಾನದ ದೇಶದ ನಿರೀಕ್ಷೆಯು ಹಿನ್ನೆಲೆಯಲ್ಲಿ ಬಹಳ ಹಾಸುಹೊಕ್ಕಾಗಿರುವುದು (ಆದಿ 50:22-26)

ಯಾಕೋಬನು ಐಗುಪ್ತಕ್ಕೆ ಬಂದ ಕೂಡಲೇ, ಫರೋಹನನ್ನು ಹರಸುವನು (ಆದಿ 47:7-10), ಹೀಗೆ ದೇವರು ಅಬ್ರಹಾಮನಿಗೆ ನಿನ್ನ ಮೂಲಕ ಅನೇಕ ಜನಾಂಗಗಳು ಆಶೀರ್ವಾದ ಹೊಂದುವರೆಂಬು (ಭಾಗಶಃ) ನೆರವೇರುತ್ತಿದೆ (ಆದಿ 12 : 3). ಯಾಕೋಬನು ಸಾಯುವ ಮುನ್ನ ಯೋಸೇಫನ ಮಕ್ಕಳನ್ನು

* ಈ ಪಾಠವನ್ನು ಜೂನ್ 25ರ ಸಬ್ಬತ್ತಿಗೆ ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.

ಆಶೀರ್ವದಿಸುವನು (ಆದಿ 48). ಯಾಕೋಬನು ತನ್ನ ಮಕ್ಕಳನ್ನೂ ಆಶೀರ್ವದಿಸುವನು (ಆದಿ 49:1–28) ಮತ್ತು ಮುಂದೆ 12 ಕುಲಗಳಾಗುವ ಚೌಕಟ್ಟಿನಲ್ಲಿ ಬಹಳ ಗಂಭೀರವಾದ ಪ್ರವಾದನೆಗಳನ್ನು ಹೇಳುತ್ತಾನೆ (ಆದಿ 49:1–27).

ಆದರೂ ಇಸ್ರಾಯೇಲನು ಐಗುಪ್ತದಲ್ಲಿ ಪರದೇಶಿಯಲ್ಲಿ "ಜೀವಿಸುವ" ವಿಷಯವು ಅವರು ವಾಗ್ದಾನದ ದೇಶದಲ್ಲಿರಬೇಕಾದ ನಿರೀಕ್ಷೆಯೊಂದಿಗೆ ಪೈಪೋಟಿಯನ್ನು ಹೊಂದಿದೆ. ಆದಿಕಾಂಡ ಪುಸ್ತಕವು ಇಸ್ರಾಯೇಲನ ಮಕ್ಕಳು ಐಗುಪ್ತದಲ್ಲಿ ನೆರೆಗೊಳ್ಳುವುದರಲ್ಲಿ ಅಂತ್ಯಗೊಂಡರೂ, ಅದರ ಕೊನೆಯ ಕೆಲವು ವಚನಗಳು ಮತ್ತೊಂದು ಜಾಗದ ಬಗ್ಗೆ ದಿಕ್ಕುಮಾಡುತ್ತದೆ: "ಯೋಸೇಫನು ತನ್ನ ಅಣ್ಣತಮ್ಮಂದಿರಿಗೆ ನನಗೆ ಅವಸಾನಕಾಲವು ಸಮೀಪಿಸಿತು. ಆದರೆ ದೇವರು ನಿಶ್ಚಯವಾಗಿ ನಿಮ್ಮನ್ನು ಪರಾಂಬರಿಸಿ ಈ ದೇಶದಿಂದ ತಾನು ಅಬ್ರಹಾಮ್, ಇಸಾಕ್ ಮತ್ತು ಯಾಕೋಬರಿಗೆ ಕೊಡುವೆನೆಂದು ಪ್ರಮಾಣವಾಗಿ ಹೇಳಿದ ದೇಶಕ್ಕೆ ನೀವು ಹೋಗಿ ಸೇರುವಂತೆ ಮಾಡುವನೆಂದು ತಿಳಿಯಿರಿ ಎಂದು ಹೇಳಿದನು" (ಆದಿಕಾಂಡ 50:24).

**ಭಾನುವಾರ** **ಜೂನ್ 19**

## ಯಾಕೋಬನು ಯೋಸೇಫನ ಬಳಿಗೆ ಹೋದನು

ಆದಿಕಾಂಡ 46 ಓದಿರಿ. ಯಾಕೋಬನು ಕಾನಾನ್‌ನಿಂದ ಬಿಟ್ಟು ಹೋದುದರ ಮಹತ್ವವೇನು?

ಕಾನಾನನ್ನು ಯಾಕೋಬನು ಬಿಟ್ಟು ಹೊರಡುವಾಗ ಬಹಳ ನಿರೀಕ್ಷೆ ಹೊಂದಿರುವನು. ಮುಂದೆ ಹಸಿವಿರುವುದಿಲ್ಲ ಮತ್ತು ಯೋಸೇಫನು ಸಹ ಬದುಕಿರುವನೆಂಬ ಅಂಶಗಳು ಆತನು ವಾಗ್ದಾನದ ದೇಶವನ್ನು ಬಿಡಲು ಸಾಕಷ್ಟು ಒತ್ತಾಸೆಯನ್ನು ಕೊಟ್ಟಿರಬೇಕು.

ಯಾಕೋಬನು ಹೊರಡುವುದು ಅಬ್ರಹಾಮನ ಅನುಭವವನ್ನು ಪ್ರತಿಧ್ವನಿಸುತ್ತದೆ, ಆದರೆ ಅಬ್ರಹಾಮನು ವಾಗ್ದಾನದ ದೇಶದೆಡೆಗೆ ಹೊರಟ್ಟಿದ್ದನು. ದೇವರಿಂದ ಅಬ್ರಹಾಮನು ಹೊಂದಿದ್ದ ವಾಗ್ದಾನ– "ನಾನು ನಿನ್ನನ್ನು ದೊಡ್ಡ ಜನಾಂಗವಾಗುವಂತೆ ಮಾಡುವೆನು" (ಆದಿ 46:3 ಮತ್ತು ಆದಿ 12:2). ಅದನ್ನೇ ಯಾಕೋಬನು ಸಹ

ದೇವರಿಂದ ಹೊಂದಿದನು. ಇಲ್ಲಿ ದೇವರು ಅವರನ್ನು ಕರೆಯುತ್ತಿರುವುದು ದೇವರು ಅಬ್ರಹಾಮನೊಂದಿಗೆ ಮಾಡಿದ ಒಡಂಬಡಿಕೆಯನ್ನು ವ್ಯಕ್ತಪಡಿಸುವದಾಗಿದೆ; ಮತ್ತು ಎರಡು ಸಂದರ್ಭದಲ್ಲಿಯೂ ದೇವರು "ಭಯಪಡಬೇಡ" ಎಂದು ಅದೇ ಭರವಸೆಯ ನುಡಿಯನ್ನು ಹೇಳಿದನು (ಆದಿ 46:3 ಮತ್ತು ಆದಿ 15:1 ಹೋಲಿಸಿ). ಈ ವಾಗ್ದಾನ ಮುಂದಿನ ಮಹಾಘನತೆಯ ವಾಗ್ದಾನವನ್ನು ಹೊಂದಿತು.

ಐಗುಪ್ತದೇಶಕ್ಕೆ ಹೊರಟವರ ಹೆಸರುಗಳ ಸಮಗ್ರಪಟ್ಟಿಯಲ್ಲಿ ಇಸ್ರಾಯೇಲನ ಮಕ್ಕಳು ಮತ್ತು ಹೆಣ್ಣುಮಕ್ಕಳು (ಆದಿ 46:7) ಬರೆದಿರುವುದರಲ್ಲಿ, ದೇವರು ಅಬ್ರಹಾಮನಿಗೆ ಸಂತಾನಹೀನ ಸ್ಥಿತಿಯಲ್ಲಿದ್ದ ಕಾಲದಲ್ಲಿ ಮಾಡಿದ ವಾಗ್ದಾನದ ಸಫಲತೆಯನ್ನು ಮನಗಾಣುತ್ತದೆ. ಎಪ್ಪತ್ತು (ಯಾಕೋಬ, ಯೋಸೇಫ ಮತ್ತು ಅವರಿಬ್ಬರು ಮಕ್ಕಳು ಸೇರಿ) ಎಂಬ ಸಂಖ್ಯೆಯು ಸಂಪೂರ್ಣತೆಯನ್ನು ಬಿಂಬಿಸುವುದು. "ಇಸ್ರಾಯೇಲ್ಯರೆಲ್ಲರೂ" ಐಗುಪ್ತಕ್ಕೆ ಹೋದದ್ದು. ಹಾಗೆಯೇ ಎಪ್ಪತ್ತು ಎಂಬ ಸಂಖ್ಯೆಯು ಒಟ್ಟು ಜನಾಂಗಗಳ ಸಂಖ್ಯೆಗೆ (ಆದಿಕಾಂಡ 10) ತಾಳೆಯಾದುದು, ಯಾಕೋಬನ ಪ್ರಯಾಣದಲ್ಲಿ ಎಲ್ಲಾ ದೇಶಗಳವರ ಅಂತ್ಯಸ್ಥಿತಿಯೂ ನಿರ್ಧಾರಗೊಳ್ಳುವುದೆಂದು ತೋರುತ್ತದೆ.

ಈ ಸತ್ಯವು ಕೇವಲ ಬಹಳ ವರ್ಷಗಳ ನಂತರ ಮಾತ್ರ ಹೆಚ್ಚು ಸ್ಪಷ್ಟವಾಗಿ ತೋರಿಬರುತ್ತದೆ; ಅಬ್ರಹಾಮನ ಮಕ್ಕಳಿಗೆ ಮಾತ್ರವಲ್ಲದೇ ಸರ್ವಮಾನವರಿಗೂ ಎಲ್ಲಾ ಸ್ಥಳದವರಿಗೂ, ಕೊಡಲ್ಪಟ್ಟ ಕ್ರೂಜೆಯು ಮತ್ತು ರಕ್ಷಣೆಯ ಯೋಜನೆಯಲ್ಲಿ ಇದನ್ನು ಕಾಣುವೆವು.

ಇನ್ನೊಂದು ಮಾತಿನಲ್ಲಿ ಹೇಳುವುದಾದರೆ, ಈ ಕುಟುಂಬ, ಅಬ್ರಹಾಮನ ಸಂತತಿ ಇವುಗಳು ಎಷ್ಟೇ ಸ್ವಾರಸ್ಯ ಕಥೆಗಳಾದರೂ ಮತ್ತು ಅದರಿಂದ ಏನೇ ಆತ್ಮೀಕ ಪಾಠಗಳನ್ನು ನಾವು ಪಡೆದರೂ– ಈ ವೃತ್ತಾಂತಗಳು ದೇವರ ವಾಕ್ಯದಲ್ಲಿದೆ ಯಾಕೆಂದರೆ ಇವು ರಕ್ಷಣೆಯ ಚರಿತೆಯ ಭಾಗವೇ; ಮತ್ತು ಬಿದ್ದುಹೋದ ಈ ಗ್ರಹದಲ್ಲಿ ಸಾಧ್ಯವಾದಷ್ಟು ಜನರಿಗೆ ವಿಮೋಚನೆ ತರುವ ದೇವರ ಯೋಜನೆಯ ಭಾಗವಾಗಿದೆ.

'ಈ ವಿಷಯದಲ್ಲಿ ಯೆಹೂದ್ಯನಿಗೂ, ಗ್ರೀಕನಿಗೂ, ಹೆಚ್ಚುಕಡಿಮೆ ಏನೂ ಇಲ್ಲ. ಎಲ್ಲರಿಗೂ ಒಬ್ಬನೇ ಕರ್ತನು; ತನ್ನ ನಾಮವನ್ನು ಹೇಳಿಕೊಳ್ಳುವವರಿಗೆ ಹೇರಳವಾಗಿ

ಕೊಡುವನು. ಕರ್ತನ ನಾಮವನ್ನು ಹೇಳಿಕೊಳ್ಳುವವರೆಲ್ಲರಿಗೆ ರಕ್ಷಣೆಯಾಗುವುದೆಂದು ಬರೆದದೆ" (ರೋಮ 10:12,13). ಪೌಲನ ಇಲ್ಲಿ ಹೇಳಿರುವಂತೆ, ಸುವಾರ್ತೆಯ ಸಾರ್ವತ್ರಿಕತೆಯ ಬಗ್ಗೆ ಏನು ಹೇಳುತ್ತಿದೆ? ಇನ್ನೂ ಹೆಚ್ಚು ಪ್ರಮುಖವಾಗಿ, ನಾವು ಸಭೆಯಾಗಿ ಸುವಾರ್ತೆಯನ್ನು ಪ್ರಸರಿಸಲು ಮಾಡಬೇಕಾದ ಕಾರ್ಯದ ಬಗ್ಗೆ ನಮಗೆ ಈ ವಾಕ್ಯವು ಏನು ಹೇಳುತ್ತದೆ?

**ಸೋಮವಾರ** **ಜೂನ್ 20**

## ಯಾಕೋಬನು ಐಗುಪ್ತದಲ್ಲಿ ನೆಲೆಯೂರಿದನು

ಯೋಸೇಫನು ಐಗುಪ್ತದಲ್ಲಿ ಜೀವಿಸುತ್ತಿರುವನೆಂದು ಏನೆಲ್ಲಾ ಹೇಳಲಾದರೂ, ಬಹಳ ಸ್ವಾರಸ್ಯಕರವಾಗಿ, ದೇವರು ಯಾಕೋಬನಿಗೆ "ರಾತ್ರಿಯ ಕನಸಿನಲ್ಲಿ" (ಆದಿಕಾಂಡ 46:2) ಕಾಣಿಸಿಕೊಂಡು ಆ ಸ್ಥಳವನ್ನು ಬಿಡಲು ಆಜ್ಞಾಪಿಸುವನು. ಯಾಕೋಬನು ವಾಗ್ದಾನದ ದೇಶವನ್ನು ಬಿಟ್ಟು ಐಗುಪ್ತಕ್ಕೆ– ಮುಂದೊಮ್ಮೆ ಇದು ದೇವರ ಮಕ್ಕಳು ಹೋಗಬಾರದಾದ ಒಂದು ಸ್ಥಳ (ಧರ್ಮೋ 17:16)ಕ್ಕೆ ಹೊರಟನು.

ಆದಿಕಾಂಡ 47ನ್ನು ಓದಿರಿ. ಈ ಚರಿತ್ರೆಯಲ್ಲಿ ಯಾವ ಆತ್ಮೀಕ ಸತ್ಯಗಳು ಹಾಗು ಸೂತ್ರಗಳನ್ನು ನಾವು ನೋಡಬಹುದು?

"ಯೋಸೇಫನು ತನ್ನೊಂದಿಗೆ ತನ್ನ ಐದು ಮಂದಿ ಸಹೋದರರನ್ನು ಫರೋಹನೆದುರಿನಲ್ಲಿ ನಿಲ್ಲಿಸಿದನು ಮತ್ತು ತಮ್ಮ ಭವಿಷ್ಯದ ವಾಸಕ್ಕೆ ಅವರಿಂದ ಭೂಮಿಯ ದಾನವನ್ನು ಪಡೆದರು. ತನ್ನ ಪ್ರಧಾನಮಂತ್ರಿ ಕೃತಜ್ಞತೆಯಾಗಿ ಅವರನ್ನು ತನ್ನ ದೇಶದ ಆಸ್ಥಾನಗಳಲ್ಲಿ ಹುದ್ದೆಕೊಟ್ಟು ಗೌರವಿಸುತೆ ರಾಜನು ಮಾಡಬಹುದಿತ್ತು; ಆದರೆ ಯೋಸೇಫನು, ಯೆಹೋವನ ಆರಾಧನೆಗೆ ನಿಷ್ಠನಾಗಿದ್ದರಿಂದ, ಅವರು ಆ ಅನ್ಯ ರಾಜಾಲಯದಲ್ಲಿರುವ ಶೋಧನೆಗಳಿಗೆ ಒಡ್ಡಲ್ಪಡಬಾರದು ಎಂದು ಬಯಸಿದನು; ಆದ್ದರಿಂದ ರಾಜನು ಅವರ ಬಗ್ಗೆ ವಿಚಾರಿಸುವಾಗ, ಅವರು ತಮ್ಮ ಕಸುಬನ್ನು ಪ್ರಾಮಾಣಿಕವಾಗಿ ಹೇಳಬೇಕೆಂದು ಅವರಿಗೆ ತಿಳಿಹೇಳಿದನು. ಯಾಕೋಬರ ಮಕ್ಕಳು ಆತನ ಸೂಚನೆಯನ್ನು ಪಾಲಿಸಿದರು ಮತ್ತು ತಾವು ಇಲ್ಲಿ ಪ್ರವಾಸಿಗಳೂ, ಇಲ್ಲಿ ನಿರಂತರವಾಗಿ ವಾಸಿಸುವರಲ್ಲಿ ಎಂದು ಹೇಳುವುದಕ್ಕೂ ಕಾಳಜಿವಹಿಸಿದರು; ಹೀಗೆ ತಾವು ಬಯಸಿದರೆ (ಈ ದೇಶದಿಂದ) ನಿರ್ಗಮಿಸುವ ಹಕ್ಕನ್ನು ತಮ್ಮಲ್ಲಿಯೇ ಉಳಿಸಿಕೊಂಡರು. ರಾಜನು ಅವರಿಗೆ ದೇಶದ 'ಉತ್ತಮ ಭಾಗವಾದ', ಗೋಷೆನ್

ಸೀಮೆಯನ್ನು ವಾಸಕ್ಕಾಗಿ ಅನುಗ್ರಹಿಸಿದನು" ಎಲೆನ್ ಜಿ ವೈಟ್, ಪ್ಯಾಟ್ರಿಯಾರ್ಕ್ಸ್ ಮತ್ತು ಪ್ರಾಫೆಟ್ಸ್, ಪುಟ 233.

ಫರೋಹನು ಸಹ ಬುದ್ಧಿವಂತಿಕೆಯಿಂದ, ಆ ಪ್ರವಾಸಿಗಳನ್ನು ತನ್ನ ದೇಶದ ಜನರಿಂದ ಪಡೆಯುವ ದಾನದಿಂದ ಅವರು ಭಿಕ್ಷುಕರಾಗಿ ಬದುಕಲು ಸಹ ಹೇಳಲಿಲ್ಲ. ಅವರ ದೇಶದ ಬಗ್ಗೆ ವಿಚಾರಿಸಿದನು (ಆದಿ 47:3) ಹೇಗೆ ಅವರು ತಮ್ಮ ಹೊಸ ಪರಿಸರದಲ್ಲಿ ಉತ್ತಮವಾಗಿ ಹೊಂದಿಕೊಳ್ಳಲು ಅನುವಾಯಿತು. ಅವರ ಉತ್ತಮ ಕೌಶಲ್ಯವನ್ನು ತನ್ನ ಸೇವೆಗೆ ಉಪಯೋಗಿಸಲು ಬಯಸಿ, ತನ್ನ ಪಶುಗಳ ಮೇಲೆ ಅವರನ್ನು ಮೇಲ್ವಿಚಾರಕರಾಗಿ ನೇಮಿಸಿದನು (ಆದಿ 47:6).

ನಂತರ, ಪರದೇಶಿಯೂ ಕನಿಷ್ಟನೂ, ಅಪರಿಚಿತನೂ ಆದ ಯಾಕೋಬನು ಆ ದೇಶದ ನಾಯಕನೆದುರು ನಿಂತುಕೊಂಡನು ಮತ್ತು "ಯಾಕೋಬನು ಫರೋಹನನ್ನು ಆಶೀರ್ವದಿಸಿದನು" ಎಂದು ಬರೆದಿದೆ. ಆತನು, ಬಡ ಪರದೇಶಿಯಾಗಿದ್ದರೂ, ಆತನೇ ಬಲಾಢ್ಯ ಐಗುಪ್ತದ ರಾಜನಾದ ಫರೋಹನನ್ನು ಆಶೀರ್ವದಿಸುವವನಾದನು? ಹೀಗೇಕೆ ಆಗಬೇಕು?

'ಅಮದ್ ಅಫ್ನೆ' ಎಂಬ ಮೂಲಕ್ರಿಯಾಪದ "ನಿಲ್ಲುವುದು" (ಆದಿ 47:7) ಎಂಬುದು ಯಾಜಕರ ವಿಷಯದಲ್ಲಿ ಉಪಯೋಗಿಸಲಾಗುತ್ತದೆ (ಯಾಜಕ 14:11). ಪುರಾತನ ಐಗುಪ್ತದಲ್ಲಿ ಫರೋಹನು ಪ್ರಧಾನ ಯಾಜಕನ ಸ್ಥಾನದಲ್ಲಿದ್ದನು. ಅಂದರೆ ಆತ್ಮೀಕ ಭಾವದಲ್ಲಿ, ಐಗುಪ್ತದ ಪ್ರಧಾನ ಯಾಜಕನಿಗಿಂತ, ಸ್ವತಃ ಫರೋಹನಿಗಿಂತ ಉನ್ನತವಾಗಿ ನಿಂತನು.

ನಾವು ಜೀವನದಲ್ಲಿ ಯಾವುದೇ ಕ್ಷೇತ್ರದಲ್ಲಿದ್ದರೂ ನಾವು "ರಾಜವಂಶಸ್ಥ ಯಾಜಕರೂ, ಪರಿಶುದ್ಧ ಜನಾಂಗವೂ, ಆತನ ವಿಶಿಷ್ಟ ಪ್ರಜೆ" (1 ಪೇತ್ರ 2:9) ಎಂಬುದು ನಮಗೇನು ಅರ್ಥಕೊಡುವುದು, ನಾವು ಇತರರಲ್ಲಿ ಹೇಗೆ ವರ್ತಿಸುತ್ತೇವೆ? ನಮ್ಮ ನಂಬಿಕೆಯು ನಮ್ಮನ್ನು ಯಾವ ಹಂಗಿಗೆ ಕಟ್ಟಿಬೀಳುವಂತೆ ಇರುವುದು?

**ಮಂಗಳವಾರ** **ಜೂನ್ 21**

## ಯಾಕೋಬನ ತನ್ನ ಮಕ್ಕಳನ್ನು ಆಶೀರ್ವದಿಸಿದನು

ಯಾಕೋಬನ ಅವಸಾನ ಕಾಲವು ಸಮೀಪಿಸಿದಾಗ, ಆತನು ಬೇತೇಲಿಗೆ

ಹಿಂತಿರುಗುವಾಗ (ಆದಿ 35:1–15), ಅಲ್ಲಿ "ನಿತ್ಯವಾದ ಸ್ವಾಸ್ತ್ಯ" (ಆದಿ 48:4)ವನ್ನು ಕೊಡುವೆ ಎಂದು ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನವನ್ನು ತನಗೂ ಮತ್ತೊಮ್ಮೆ ಹೇಳಿದ (ಆದಿ 17:8) ವಾಗ್ದಾನವನ್ನು ಜ್ಞಾಪಿಸಿಕೊಂಡನು. ತನಗೆ ಸಾವು ಹತ್ತರಿಸಿದ್ದರೂ, ಆ ವಾಗ್ದಾನದ ದೇಶದ ನಿರೀಕ್ಷೆಯೂ, ಅವನನ್ನು ಸಂತೈಸುವುದಾಗಿದೆ. ಅನಂತರ, ಯಾಕೋಬನು ತಿರುಗಿಕೊಂಡು ಯೋಸೇಫನ ಇಬ್ಬರು ಮಕ್ಕಳನ್ನು ತನ್ನ ಮುಂದೆ ಸಂತಾನದ ಸಂಬಂಧದಲ್ಲಿ, ಆಶೀರ್ವದಿಸಿದನು.

ಆದಿಕಾಂಡ 48ನ್ನು ಓದಿರಿ. ಯಾಕೋಬನು ಬೇರೆ ಮೊಮ್ಮಕ್ಕಳನ್ನು ಆಶೀರ್ವದಿಸದೇ, ಯೋಸೇಫನ ಇಬ್ಬರು ಮಕ್ಕಳನ್ನು ಮಾತ್ರ ಇಲ್ಲಿ ಆಶೀರ್ವದಿಸಿದ್ದು ಯಾಕೆ?

ತನ್ನ ಮೊಮ್ಮಕ್ಕಳಲ್ಲಿ ಯೋಸೇಫನ ಮಕ್ಕಳಾದ ಮನಸ್ಸೆ ಮತ್ತು ಎಫ್ರಾಯಿಮ್, ಎಂಬಿಬ್ಬರನ್ನು ಮಾತ್ರ ಆಶೀರ್ವದಿಸಿದನು. ಹೀಗೆ ಅವರು ಮೊಮ್ಮಕ್ಕಳ ಸ್ಥಾನದಿಂದ ಮಕ್ಕಳ ಸ್ಥಾನದಲ್ಲಿ ಏರಿಸಲ್ಪಟ್ಟರು (ಆದಿ 48:5). ಯಾಕೋಬನ ಆಶೀರ್ವಾದದಲ್ಲಿ ಎರಡನೆಯವನಿಗೆ (ಎಫ್ರಾಯಿಮ್) ಮೊದಲನೆಯವನಿಂದ (ಮನಸ್ಸೆ) ಹೆಚ್ಚು ಪ್ರಾಶಸ್ತ್ಯವು ಕಂಡುಬಂದರೂ, ಯಾಕೋಬನ ಆಶೀರ್ವಾದವು ನಿಜವಾಗಿ ಯೋಸೇಫನ ವಿಷಯವಾಗಿಯೇ ಇತ್ತು (ಆದಿ 48:15).

ನಾವು ಇಲ್ಲಿ ದೇವರು ಅವರಿಗೆ ಪೂರ್ವದಲ್ಲಿ ಹೇಗೆ ಪ್ರಾಮಾಣಿಕವಾಗಿಯೂ ಮತ್ತು ಭವಿಷ್ಯದಲ್ಲಿ ತನ್ನ ವಾಗ್ದಾನವನ್ನು ನೆರವೇರಿಸುವವನೂ ಎಂಬುದನ್ನು ಗ್ರಹಿಸಬಹುದು. ತಮಗೆ ಆಹಾರಕೊಟ್ಟು, ಕಾಪಾಡಿದ ದೇವರನ್ನು ಯಾಕೋಬನು, "ಅಬ್ರಹಾಮನ ಮತ್ತು ಇಸಾಕನ ದೇವರು" (ಆದಿ 48:13) ಎಂದು ಕರೆಯುತ್ತಾನೆ. ಅದೇ ದೇವರು "ತನ್ನನ್ನು ಎಲ್ಲಾ ಕೇಡುಗಳಿಂದ ತಪ್ಪಿಸಿದವನು" (ಆದಿ 48:16). ತಾನು ಹೊರಡಿದಾಗ, ತನ್ನ ಹೆಸರನ್ನು ಯಾಕೋಬನಿಂದ ಇಸ್ರಾಯೇಲನೆಂದು ಬದಲಿಸಿದ (ಆದಿ 32:24–29)ವನು "ಬೇತೇಲಿನ ದೇವರು" (ಆದಿ 31:13) ಎಂದೂ ಯಾಕೋಬನು ಮನಸ್ಸಿನಲ್ಲಿ ನೆನೆದನು.

ಕೆಟ್ಟದ್ದನ್ನೆಲ್ಲಾ ಒಳ್ಳೆಯದಾಗಿ ತಿರುಗಿಸಿದ ದೇವರ ಈ ಎಲ್ಲಾ ಅನುಭವಗಳ ನೆಲೆಯಲ್ಲಿ ತನ್ನನ್ನೂ, ತನ್ನ ಮಗ ಯೋಸೇಫನನ್ನೂ ದೇವರು ಕಾಯುವನೂ;

ಮಾತ್ರವಲ್ಲದೇ ಭವಿಷ್ಯದಲ್ಲಿಯೂ, ತನ್ನ ವಂಶದವರು ಕಾನಾನಿಗೆ ಹಿಂತಿರುವುದರ ನಿರೀಕ್ಷೆಯನ್ನು ಯಾಕೋಬನು ತಿಳಿಸುತ್ತಿರುವನು. ಅವನಲ್ಲಿ ಈ ನಿರೀಕ್ಷೆಯಿದ್ದುದ್ದನ್ನು ಶೆಕೆಮಿನ ಬಗ್ಗೆ ಆತನು ಪ್ರಸ್ತಾಪಿಸಿದ್ದರಲ್ಲಿ ಕಾಣಬಹುದು. ಅಲ್ಲಿ ಒಂದು ಭೂಮಿಯನ್ನೂ ಕ್ರಯವಾಗಿ ಪಡೆದಿದ್ದನು (ಆದಿ 33:19). ಅಲ್ಲಿಯೇ ಯೋಸೇಫನ ಎಲುಬುಗಳನ್ನು ಸಮಾಧಿ ಮಾಡಿದರು (ಯೆಹೋಶುವ 24:32) ಮತ್ತು ಅಲ್ಲಿಯೇ ಇಸ್ರಾಯೇಲ್ಯರಿಗೆ ಆ ದೇಶವು ಹಂಚಿಕೆಯಾಗಬೇಕಿತ್ತು (ಆದಿ 24:1). ಹೀಗೆ ಆದ ಎಲ್ಲಾ ಘಟನೆಗಳ ನಡುವೆಯೂ ಯಾಕೋಬನು ದೇವರನ್ನು ಈ ಕುಟುಂಬಕ್ಕೆ "ನನ್ನ ಮೂಲಕ ಭೂಮಿಯ ಎಲ್ಲಾ ಜನಾಂಗಗಳನ್ನು ಆಶೀರ್ವದಿಸುವೆನು" (ಆದಿ 12:3) ಎಂಬ ದೇವರ ವಾಗ್ದಾನವನ್ನು ಯಾಕೋಬನು ಮನದಲ್ಲಿ ನೆನೆದುಕೊಂಡನು.

ಅಪೋಸ್ತಲರ ಕೃತ್ಯ 3:25,26ನ್ನು ಓದಿರಿ. ಪೇತ್ರನ ಪ್ರಕಾರ ಆದಿಕಾಂಡ 12:3ರ ವಾಗ್ದಾನವು ಹೇಗೆ ನೆರವೇರುತ್ತಿದೆ? ನಾವು ಸಹ ಈ ಆಶೀರ್ವಾದವನ್ನು ಪಡೆದಿದ್ದೇವೆ, ಹೇಗೆ?

**ಬುಧವಾರ** **ಜೂನ್ 22**

## ಯಾಕೋಬನು ತನ್ನ ಮಕ್ಕಳನ್ನು ಆಶೀರ್ವದಿಸಿದನು

ಆದಿ 49:1–28ನ್ನು ಓದಿರಿ. ಯಾಕೋಬನು ತನ್ನ ಮಕ್ಕಳನ್ನು ಆಶೀರ್ವದಿಸಿದ್ದರಲ್ಲಿರುವ ಆತ್ಮೀಕ ಮಹತ್ವವೇನು?

ಇಸ್ರಾಯೇಲ್ಯರ ಕುಲಗಳ ಚರಿತ್ರೆಯ ಸನಿಹಕಾಲದಲ್ಲಿ ನಡೆಯಬೇಕಾದ ಪ್ರವಾದನೆಗಳ ಆಚೆ, ಯಾಕೋಬನು ಮೆಸ್ಸೀಯನನ್ನು ಮತ್ತು ರಕ್ಷಣೆಯ ಶ್ರೇಷ್ಠ ನಿರೀಕ್ಷೆಯನ್ನು ದೃಷ್ಟಿಸುತ್ತಿದ್ದಾನೆ. ಈ ನಿರೀಕ್ಷೆಯೂ ಯಾಕೋಬನ ಮಾತುಗಳ ಆರಂಭದಲ್ಲಿ ಹೇಳಿದ– "ಮುಂದಿನ ಕಾಲದಲ್ಲಿ" ಎಂಬ ಮಾತುಗಳಲ್ಲಿ ತೋರುತ್ತದೆ; ಇದು "ಮೆಸ್ಸೀಯ ರಾಜನು" (ಯೆಶಾಯ 2:2; ದಾನಿ 10:14 ಬರುವುದನ್ನು ಸೂಚಿಸುವ ಉದ್ಗಾರವೇ.

ನಂತರದ ಮಾತುಗಳಲ್ಲಿ ಆ ಪ್ರತಿಯೊಬ್ಬರ ಮುಂದಿನ ಸಂತತಿಯಲ್ಲಿ ಆಗುವುದನ್ನು ಹೇಳಿದೆ. ಇವು ಪೂರ್ವನಿರ್ಣಯಗೊಂಡ ಅಂತ್ಯಗತಿಗಳಲ್ಲ– ಅವರಿಗೆ ಆದವುಗಳು ಹಾಗೆಯೇ ಆಗಬೇಕೆಂದು ದೇವರು ನಿರ್ಧರಿಸಿದ್ದನು ಎಂದು ತಿಳಿಯಬಾರದು; ಬದಲಿಗೆ, ಅವರ ಮತ್ತು ಅವರ ಮಕ್ಕಳ ಸ್ವಭಾವಗಳು ಉಂಟುಮಾಡುವ

ಪರಿಣಾಮಗಳನ್ನು ವ್ಯಕ್ತಗೊಳಿಸುತ್ತವೆ. ಉದಾಹರಣೆಯಾಗಿ, ಓರ್ವ ನಿರ್ದೋಷಿಯನ್ನು ಕೊಲ್ಲುವರೆಂದು ದೇವರು ತಿಳಿದಿರುವುದು, ಆ ಕೊಲೆಗಾರನೇ ಮಾಡುತ್ತಾನೆ ಎಂದು ದೇವರು ನಿರ್ಧರಿಸುತ್ತಾನೆ ಎಂಬುದು ಮೂಲತಃ ಬಹಳ ವಿಭಿನ್ನವಾಗಿದೆ.

ಆದಿಕಾಂಡ 49:8–12ನ್ನು ಓದಿರಿ. ಇಲ್ಲಿ ಯಾವ ಪ್ರವಾದನೆಯು ಹೇಳಿದೆ ಮತ್ತು ಅದು ಪ್ರಮುಖವೇಕೆ?

ಮಾನವರ ಸ್ವತಂತ್ರ್ಯ ಆಯ್ಕೆಯ ಮೇಲೆಯೂ, ದೇವರು ಭವಿಷ್ಯವನ್ನು ತಿಳಿದಿದ್ದಾನೆ, ಮತ್ತು ಯೆಹೂದನ ಮೂಲಕವೇ ಮೆಸ್ಸೀಯನು ಬರಬೇಕೆಂದು ಆತನು ಏರ್ಪಡಿಸಿದ್ದನು. ಯೆಹೂದನು (ಆದಿ 49:8–12) ಸಿಂಹ ಎಂದು ಸೂಚಿಸಲ್ಪಟ್ಟಿದ್ದಾನೆ (ಆದಿ 49:9) ಮತ್ತು ಇದು ರಾಜತ್ವ ಮತ್ತು ಸ್ತುತಿಯನ್ನು ಸೂಚಿಸುವುದು. ಯೆಹೂದನ ರಾಜ ದಾವೀದನನ್ನು ಪಡೆಯುವನು; ಮಾತ್ರವಲ್ಲದೇ 'ಶಿಲೋವ'ವನ್ನು ಸಹ– ಅಂದರೆ ಶಾಲೋಮ್, "ಸಮಾಧಾನ"ವನ್ನು ತರುವ "ಒಬ್ಬನು" (ಯೆಶಾಯ 9:6,7) ತೋರಿಬರುವನು; ಮತ್ತು ಆತನಿಗೆ "ಜನಾಂಗಗಳು ವಿಧೇಯರಾಗುವರು" (ಆದಿ 49:10).

ಯೆಹೂದ್ಯರು ಇದನ್ನು ಮೆಸ್ಸೀಯನ ಪ್ರವಾದನೆಯಾಗಿ ನೋಡಿ ಮೆಸ್ಸೀಯನ ಆಗಮನಕ್ಕೆ ತಾಳೆಹಾಕುವರು, ಮತ್ತು ಕ್ರೈಸ್ತರು ಇದನ್ನು ಕ್ರಿಸ್ತನಿಗೇ ಗುರುತು ಮಾಡತೋರುವರು. "ಅವನಿಗೆ ಅನ್ಯಜನಗಳು ವಿಧೇಯರಾಗುವರು" (ಆದಿ 49:10), ಎಂಬುದು ಹೊಸ ಒಡಂಬಡಿಕೆಯಲ್ಲಿರುವ "ಯೇಸುವಿನ ಹೆಸರಿನ ಮುಂದೆ ಪ್ರತಿಯೊಬ್ಬರೂ ಅಡ್ಡಬೀಳುವರು" (ಫಿಲಿಪ್ಪಿ 2:10) ಎಂಬುದರ ಪೂರ್ವಸೂಚಿ–ಯಾಗಿರುವುದು.

ಎಲೆನ್ ಜಿ ವೈಟ್‌ರವರು ಬರೆದಂತೆ: "ಕಾಡಿನ ರಾಜನಾದ ಸಿಂಹವು ಈ ಕುಲಕ್ಕೆ ಯೋಗ್ಯ ಚಿಹ್ನೆಯಾಗಿದೆ; ಇದರಿಂದಲೇ ದಾವೀದನು ಬಂದನು, ಮತ್ತು ದಾವೀದನ ಕುಮಾರನೂ ಶಿಲೋ, "ಯೂದಕುಲದ ಸಿಂಹವು". ಈತನಿಗೆ ಎಲ್ಲಾ ಅಧಿಕಾರಿಗಳು ಅಂತಿಮವಾಗಿ ಅಡ್ಡಬೀಳುವವು ಮತ್ತು ಎಲ್ಲಾ ದೇಶಗಳು ತಲೆಬಾಗುವರು"– ಪ್ಯಾಟ್ರಿಯಾರ್ಕ್ಸ್ ಮತ್ತು ಪ್ರಾಫೆಟ್ಸ್, ಪುಟ 236.

ಬೇರೆ ಎಲ್ಲಾ ದೇಶಗಳವರು ಯೇಸುವಿಗೆ ಅಡ್ಡಬೀಳುವ ಮುಂಚೆ, ಈಗಲೇ ನಾವು ಏಕೆ ಅಡ್ಡಬಿದ್ದು ಆರಾಧಿಸಬೇಕು?

**ಗುರುವಾರ** **ಜೂನ್ 23**

## ವಾಗ್ದಾನದ ದೇಶದ ನಿರೀಕ್ಷೆಯು

ಆದಿಕಾಂಡ 49:29–50:21ನ್ನು ಓದಿರಿ. ಆದಿಕಾಂಡ ಪುಸ್ತಕದ ಕೊನೆಯ ಅಧ್ಯಾಯಗಳಲ್ಲಿ ನಿರೀಕ್ಷೆಯ ಯಾವ ಮಹಾಸಾರಗಳನ್ನು ಹೊತ್ತುಕೊಂಡಿದೆ?

ಆದಿಕಾಂಡದ ಮುಕ್ತಾಯದಲ್ಲಿ ನಿರೀಕ್ಷೆಯಿಂದ ತುಂಬಿರುವ ಮೂರು ಘಟನೆಗಳಿಂದ ಕೂಡಿದೆ.

ಮೊದಲನೆಯದಾಗಿ, ವಾಗ್ದಾನದ ದೇಶಕ್ಕೆ ಇಸ್ರಾಯೇಲು ಪುನಃ ಹಿಂದಿರುಗುವರೆಂಬ ನಿರೀಕ್ಷೆ ಇದೆ. ಆದಿಕಾಂಡ ಪುಸ್ತಕದ ಲೇಖಕ ಮೋಶೆಯು, ಯಾಕೋಬ ಮತ್ತು ಯೋಸೇಫರ ಮರಣಗಳು ಮತ್ತು ಸಮಾಧಿ ಮಾಡುವ ಘಟನೆಗಳಲ್ಲಿ ವಾಗ್ದಾನದ ದೇಶದ ಕಡೆಗೆ ಗಮನಹರಿಸಿದ್ದಾನೆ. ಯಾಕೋಬನು, 'ಇಸ್ರಾಯೇಲ್ಯರ ಹನ್ನೆರಡು ಕುಲಗಳನ್ನು' ಆಶೀರ್ವದಿಸಿ ಪ್ರವಾದನೆ ಹೇಳಿದ ತಕ್ಷಣದಲ್ಲಿ (ಆದಿ 49:28) ತನ್ನ ಸಾವಿನ ಬಗ್ಗೆ ಪ್ರಸ್ತಾಪಿಸಿ, ತನ್ನನ್ನು ಸಾರಳನ್ನು ಕಾನಾನಿನಲ್ಲಿ ಸಮಾಧಿ ಮಾಡಿದ್ದ, ಮಕ್ಪೆಲ್ಲ ಗವಿಯಲ್ಲಿ ಹೂಣಿಡಬೇಕೆಂದು ತನ್ನ ಮಕ್ಕಳಿಗೆ ಆಜ್ಞಾಪಿಸುತ್ತಾನೆ (ಆದಿ 49:29–31). ಆತನ ಶವವನ್ನು ಕಾನಾನ್‌ಗೆ ಒಯ್ಯುವ ಮೆರವಣಿಗೆಯು ಕೆಲವು ಶತಮಾನಗಳ ನಂತರ ಐಗುಪ್ತದಿಂದ ಕಾನಾನಿಗೆ ಹೊರಡುವುದರ ಪೂರ್ವಸೂಚಿಯಾಗಿದೆ.

ಎರಡನೆಯದಾಗಿ, ದೇವರು ಕೆಟ್ಟದ್ದನ್ನು ಒಳ್ಳೆಯದಕ್ಕೆ ತಿರುಗಿಸುತ್ತಾನೆ ಎಂಬ ನಿರೀಕ್ಷೆ ಇದೆ. ಯಾಕೋಬನ ಮರಣದ ನಂತರ, ಯೋಸೇಫನ ಸಹೋದರರು ತಮ್ಮ ಭವಿಷ್ಯದ ಬಗ್ಗೆ ಚಿಂತೆ ಹೊಂದಿದರು. ಈಗ ಯೋಸೇಫನು ಸೇಡು ತೀರಿಸಿಕೊಳ್ಳುವನೆಂದುಲು ಹೆದರಿದರು. ಅವರು ಯೋಸೇಫನ ಬಳಿಗೆ ಬಂದು ಆತನ ಮುಂದೆ ಅಡ್ಡಬಿದ್ದು, ಅವನ ಸೇವಕರಾಗಲು (ಆದಿ 50:18) ತಯಾರಾಗಿದ್ದುದು, ಯೋಸೇಫನ ಕನಸುಗಳನ್ನು ಜ್ಞಾಪಿಸಿಕೊಡುತ್ತವೆ. ಯೋಸೇಫನು ಅವರಿಗೆ ಭರವಸೆ ಕೊಟ್ಟು "ಭಯಪಡದಿರಲು" ಹೇಳಿ (ಆದಿ 50:19), ಯಾವುದನ್ನು ಅವನಿಗೆ ವಿರುದ್ಧ ಕೆಟ್ಟದ್ದಾಗಿ ಯಾಚಿಸಿದ್ದರೋ "ದೇವರು ಅದನ್ನು ಒಳ್ಳೆಯದಕ್ಕಾಗಿಯೇ"

ಮಾಡಿದ್ದನು (ಆದಿ 50:20) ಮತ್ತು ಘಟನೆಗಳನ್ನು ತಿರುಗಿಸಿ ರಕ್ಷಣೆಗಾಗಿ ಏರ್ಪಡಿಸಿದ್ದನು (ಆದಿ 50:19–21 ಮತ್ತು 45:5,7–9ಕ್ಕೆ ಹೋಲಿಸಿ). ಅಂದರೆ, ಮಾನವರ ಅನೇಕ ಘಲ್ಯಗಳಲ್ಲಿ ದೈವಾನುಗ್ರಹವು ಜಯ ಸಾಧಿಸುವುದು.

ಮೂರನೆಯದಾಗಿ, ಬಿದ್ದುಹೋದ ಮಾನವ ಜನಾಂಗವನ್ನು ರಕ್ಷಿಸುವನೆಂಬ ನಿರೀಕ್ಷೆಯನ್ನು ಹೊಂದಿದೆ. ಆದಿಕಾಂಡದ ಕೊನೆಯ ವಚನದಲ್ಲಿ ಬರೆದಿರುವ ಯೋಸೇಫನ ಸಾವಿನ ವಿಷಯಕ್ಕಿಂತ ಅದು ಬಹು ವಿಸ್ತೃತವಾಗಿದೆ. ಯೋಸೇಫನು ಅಂತಿಮವಾಗಿ ತನ್ನ ಎಲುಬುಗಳನ್ನು ಹೂಣಲು ಹೇಳದೆ, "ದೇವರು ನಿಸ್ಸಂದೇಹವಾಗಿ ನಿಮ್ಮನ್ನು ಪರಾಂಬರಿಸಿದಾಗ, ನೀವು ನನ್ನ ಶವವನ್ನು ನಿಮ್ಮ ಸಂಗಡ ಹೊತ್ತುಕೊಂಡು ಹೋಗಬೇಕು" (ಆದಿಕಾಂಡ 50:25) ಎಂದು ಹೇಳಿದನು. ಅದನ್ನು ನೆರವೇರಿಸಲು ಅವರು ಕೆಲವು ಶತಮಾನಗಳ ನಂತರ ನಿಜವಾಗಿ ಹೊತ್ತು ಹೋದರು (ವಿಮೋ 13:19). ಕಟ್ಟ ಕಡೆಯದಾಗಿ, 'ವಾಗ್ದಾನದ ದೇಶ', ಕಾನಾನಿನ ನಿರೀಕ್ಷೆಯು ಮುಂದಿನ ಅಂತಿಮವಾಗಿ ಸಿಗುವ ರಕ್ಷಣೆ, ಪುನಃಸ್ಥಾಪನೆ, ನೂತನಾಕಾಶ ಹಾಗೂ ನೂತನಭೂಮಿಯ ಹೊಸ ಯೆರೂಸಲೇಮು– ಇವುಗಳ ಮುಂಗುರುತಾಗಿವೆ; ನಮ್ಮೆಲ್ಲರಿಗೂ ಶಿಲೋವಿನ ಮರಣದಿಂದ ದೃಢಮಾಡಲ್ಪಟ್ಟ ನಿರೀಕ್ಷೆ, ಮಹಾನಿರೀಕ್ಷೆಗೆ ಮುನ್ನುಡಿಯಾಗಿದೆ.

ಪ್ರಕಟಣೆ 21:1–4ನ್ನು ಓದಿರಿ. ನಮಗಿರುವ ಮಹಾವೈಭವದ ನಿರೀಕ್ಷೆಯನ್ನು ಇವು ಹೇಗೆ ವ್ಯಕ್ತಮಾಡುತ್ತವೆ? ಈ ವಾಗ್ದಾನವು ಇಲ್ಲದೇ ಹೋದರೆ, ನಮ್ಮೆಲ್ಲಾ ಸಮಸ್ಯೆಗಳ ಅಂತ್ಯದಲ್ಲಿ ಸಾವಿನ ಹೊರತಾಗಿ ಬೇರಾವ ನಿರೀಕ್ಷೆಯೂ ನಮಗಿದೆ?

**ಶುಕ್ರವಾರ** **ಜೂನ್ 24**

**ಹೆಚ್ಚಿನ ಚಿಂತನೆ :** ಎಲೆನ್ ಜಿ ವೈಟ್‌ರವರ ಪ್ಯಾಟ್ರಿಕ್ಯಾರ್ಕ್ಸ್ ಮತ್ತು ಪ್ರಾಫೆಟ್ಸ್ ಪುಸ್ತಕದ "ಯೋಸೇಫ ಮತ್ತು ಅವನ ಸಹೋದರರು" ಪುಟಗಳು 233–240ನ್ನು ಓದಿರಿ.

"ಯೋಸೇಫನ ಜೀವನವು ಯೇಸುವಿನ ಜೀವನವನ್ನು ಉದಾಹರಿಸುವುದು. ತಮ್ಮ ತಮ್ಮನನ್ನು ಗುಲಾಮನಾಗಿ ಮಾಡಲು ಅವರಲ್ಲಿದ್ದ ಹೊಟ್ಟೆಕಿಚ್ಚು ಅನುವು ಮಾದಿತು; ಹೀಗೆ ಅವನು ತಮಗಿಂತ ಹೆಚ್ಚಿನವನಾಗುವುದನ್ನು ತಡೆಯ ಬಯಸಿದರು. ಅವನು ಐಗುಪ್ತಕ್ಕೆ ಒಯ್ಯಲಾದ ಮೇಲೆ, ಅವನ ಕನಸುಗಳು ತಮ್ಮನ್ನು ಎಂದಿಗೂ

ಬಾಧಿಸವು ಮತ್ತು ಅವು ನೆರವೇರುವ ಸಾಧ್ಯತೆಗಳನ್ನು ತೆಗೆದುಹಾಕಿದ್ದೇವೆಂದು ತಮ್ಮನ್ನೇ ಹೊಗಳಿಕೊಂಡರು. ಆದರೆ, ಅವರ ಮಾರ್ಗಗಳನ್ನು ದೇವರು ತನ್ನ ಅಧಿಕಾರದಿಂದ ತಳ್ಳಿಹಾಕಿ, ಏನಾಗಬಾರದೆಂದು ಅವರು ನೆನೆಸಿದರೋ ಅದನ್ನೇ ಕೈಗೂಡಿಸಿದನು. ಹಾಗೆಯೇ, ಯೆಹೂದ್ಯ ಯಾಜಕರು ಮತ್ತು ಹಿರಿಕರು ಕ್ರಿಸ್ತನು ಜನರ ಗಮನವನ್ನು ತಮ್ಮಿಂದ ತನ್ನ ಕಡೆಗೆ ಸೆಳೆಯುವನೆಂದು ಹೆದರಿ, ಆತನ ಮೇಲೆ ಹೊಟ್ಟೆಕಿಚ್ಚು ಪಟ್ಟರು. ಆತನು ರಾಜನಾಗಬಾರದೆಂದು ಆತನನ್ನು ಕೊಂದರು, ಆದರೆ ಆ ಮೂಲಕ ಅದೇ ನಿಜಪರಿಣಾಮ (ರಾಜನಾಗುವುದು)ವನ್ನು ಉಂಟು ಮಾಡುವವರಾದರು.

ಯೋಸೇಫನು, ಐಗುಪ್ತದಲ್ಲಿ ಸೆರೆಯಾಳಾಗುವುದರ ಮೂಲಕ, ತನ್ನ ತಂದೆಯ ಮನೆಯ ಸಂರಕ್ಷನಾದನು; ಆದಾಗ್ಯೂ, ಆತನ ಸಹೋದರರ ಅಪರಾಧವನ್ನು ಅದು ತಗ್ಗಿಸಲಿಲ್ಲ. ಹಾಗೆಯೇ ಯೇಸುಕ್ರಿಸ್ತನು ಆತನ ವೈರಿಗಳಿಂದ ಕ್ರೂಜೆಗೆ ಹಾಕಲ್ಪಟ್ಟದ್ದೂ ಸಹ, ಆತನನ್ನು ಮಾನವ ಜನಾಂಗದ ವಿಮೋಚಕ, ಬಿದ್ದುಹೋದ (ಮಾನವ) ಸಂತತಿಯ ರಕ್ಷಕ ಮತ್ತು ಸರ್ವಲೋಕದ ಅರಸನನ್ನಾಗಿ ಮಾಡಿತು; ಆದರೆ, ತನ್ನ ಮಹಿಮೆಗಾಗಿ ಮತ್ತು ಮಾನವ ಒಳಿತಿಗಾಗಿ ದೇವರು ನಿಯಾಮಕ ಹಸ್ತವು ಘಟನೆಗಳನ್ನು ನಿಯಂತ್ರಿಸಿಯೇ ಇಲ್ಲವೆಂಬಂತೆ ಆತನನ್ನು ಕೊಂದವರ ಅಪರಾಧವು ಮಹಾಘೋರವಾಗಿತ್ತು.

ತನ್ನ ಸ್ವಂತ ಸಹೋದರರಿಂದಲೇ ಯೋಸೇಫನು ಅನ್ಯರಿಗೆ ಮಾರಲ್ಪಟ್ಟಂತೆಯೇ, ಕ್ರಿಸ್ತನು ಸಹ ತನ್ನ ಓರ್ವಶಿಷ್ಯನಿಂದಲೇ ತನ್ನ ಕ್ರೂರ ವಿರೋಧಿಗಳಿಗೆ ಮಾರಲ್ಪಟ್ಟನು. ಯೋಸೇಫನು ಸನ್ನಡತೆಯ ನಿಮಿತ್ತ ಸುಳ್ಳು ಆಪಾದನೆಯನ್ನು ಹೊತ್ತು, ಸೆರೆಮನೆಗೆ ಹಾಕಲ್ಪಟ್ಟನು; ಹಾಗೆಯೇ ಕ್ರಿಸ್ತನು ಕೂಡ ತನ್ನ ನೀತಿವಂತಿಕೆಯ, ಸ್ವ-ನಿರಾಕರಣೆಯ ಜೀವಿತವು ಪಾಪವನ್ನು ಖಂಡಿಸುತ್ತಿದ್ದದರಿಂದ ನಿರಾಕರಿಸಲ್ಪಟ್ಟು, ತಿರಸ್ಕಾರ ಹೊಂದಿದನು; ಮತ್ತು ಆತನಲ್ಲಿ ಯಾವ ಅಪರಾಧವಿಲ್ಲದಿದ್ದರೂ, ಸುಳ್ಳು ಸಾಕ್ಷಿಗಳ ಆಧಾರದಲ್ಲಿ ಶಿಕ್ಷಿಸಲ್ಪಟ್ಟನು. ಮತ್ತು ಅನ್ಯಾಯ ಹಾಗೂ ಕ್ರೌರ್ಯತೆಯ ನಡುವೆ ಯೋಸೇಫನ ತಾಳ್ಮೆ ಮತ್ತು ಸಾತ್ವಿಕತೆ, ಪ್ರೀತಿಹೀನ ತನ್ನ ಸಹೋದರೆಡೆ ತೋರಿದ ಮುಕ್ತಕ್ಷಮಾಪಣೆ ಮತ್ತು ಉನ್ನತ ಔದಾರ್ಯತೆಗಳು, ಆ ದುಷ್ಟರ ದ್ವೇಷ ಮತ್ತು ನಿಂದೆಗಳನ್ನು ರಕ್ಷಕನು ಗೊಣಗಾಡದೆ ಸಹಿಸಿಕೊಂಡಿದ್ದುದು ಮತ್ತು ತನ್ನನ್ನು

ಕೊಂದವರಿಗೆ ಮಾತ್ರವಲ್ಲದೆ, ತಮ್ಮ ಪಾಪಗಳನ್ನು ಅರಿಕೆಮಾಡಿ ಕ್ಷಮಾಪಣೆ ಬೇಡಿ ತನ್ನೆಡೆಗೆ ಬರುವ ಎಲ್ಲರನ್ನೂ ಕ್ಷಮಿಸುವುದನ್ನು ನಿರೂಪಿಸುತ್ತವೆ" ಎಲೆನ್ ಜಿ ವೈಟ್, ಪ್ಯಾಟ್ರಿಯಾರ್ಕ್ಸ್ ಮತ್ತು ಪ್ರಾಫೆಟ್ಸ್, ಪುಟ 239, 240.

## ಚರ್ಚಿಸಬೇಕಾದ ಪ್ರಶ್ನೆಗಳು

1. ಯಾಕೋಬನು ಸತ್ತನಂತರ ಯೋಸೇಫನು ತಮ್ಮ ಮೇಲೆ ಸೇಡು ತೀರಿಸಿಕೊಳ್ಳುವನೆಂದು ಭಯಪಟ್ಟರು. ಅವರ ಪಾಪಪ್ರಜ್ಞೆಯು ಅವರನ್ನು ಕಾಡುತ್ತಿತ್ತು ಎಂದು ಇದು ಹೇಗೆ ತೋರಿಸುವುದು? ಅಪರಾಧ ಮಾಡಿದವರಿಗೆ ಕ್ಷಮಾಪಣೆಯ ಕುರಿತು ಯೋಸೇಫನ ಪ್ರತಿಕ್ರಿಯೆಯಿಂದ ನಾವು ಏನು ಕಲಿಯಬಹುದು?

2. ಯೋಸೇಫನ ಮತ್ತು ಯೇಸುವಿಗೂ ಇರುವ ಬೇರೆ ಯಾವ ಹೋಲಿಕೆಗಳನ್ನು ನೀವು ಕಾಣುವಿರಿ?

3. ದೇವರಿಗೆ ಭವಿಷ್ಯವು ಬಹಳ ಸ್ಪಷ್ಟವಾಗಿ ತಿಳಿದಿದ್ದರೂ, ನಾವು ಮಾಡುವ ಆಯ್ಕೆಗೆ ಸಂಪೂರ್ಣ ಸ್ವತಂತ್ರ್ಯವನ್ನು ಹೊಂದಿದ್ದೇವೆ ಎಂಬುದರ ಬಗ್ಗೆ ಆಲೋಚಿಸಿರಿ. ಈ ಎರಡು ಆಲೋಚನೆಗಳನ್ನು ನೀವು ಹೇಗೆ ಹೊಂದಿಸಿ ನೋಡುವಿರಿ?


International Kannada Sabbath School
ಅಡ್ವೆಂಟಿಸ್ಟ್ ವರ್ಲ್ಡ್ ರೇಡಿಯೋ
ಅರ್ಪಿಸುವ
“ಅಂತರಾಷ್ಟ್ರೀಯ ಕನ್ನಡ ಸಬ್ಬತ್ ಶಾಲೆ”
ಪ್ರತಿದಿನ ಸಂಜೆ 7:00 ಘಂಟೆಗೆ
“ಅನುದಿನದ ಮನ್ನಾ”
ಪ್ರತಿದಿನ ಮುಂಜಾನೆ 6 :00 ಘಂಟೆಗೆ
ಜೂಮ್ ಕಾರ್ಯಕ್ರಮ
zoom
ID: 883 6110662
Passcode: 123456